**ಸಾಕ್ಷಿಗೆ ದಿನಾಂಕ *21 -11-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ *1* ನೇ ಎದುರುದಾರರ ಪರ ಶ್ರೀ ವಿ ಬಿ ಡಿ ವಕೀಲರಿಂದಃ**

ನನಗೆ ಅಪಘಾತದಲ್ಲಿ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕಾರ ಚಾಲಕನ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ ಮತ್ತು ಸಂಗಪ್ಪ ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿದಾರರು ಕೆಂಪು ಬಣ್ಣದ ಕಾರು ನಮ್ಮ ಹಿಂದಿನಿಂದ ಬಂದು ಅಪಘಾತ ಪಡಿಸಿರುತ್ತದೆ ಎಂದು ಹೇಳುತ್ತಾರೆ. ಮೃತ ಸಂಗಪ್ಪ ರವರು ಪ್ರತಿ ತಿಂಗಳು 50 ಸಾವಿರ ರೂ.ಗಳನ್ನು ದುಡಿಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ಕಾರಿಗೆ ವಿಮೆ ಇತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಪರಿಹಾರದ ಹಣವನ್ನು ಕೊಡಲು 1 ನೇ ಎದುರುದಾರರು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 4 **ನೇ ಎದುರುದಾರರ ಪರ ಶ್ರೀ ಆರ್ ಕೆ ಬಿ ವಕೀಲರಿಂದಃ**

ನಾನು ಸಂಗಪ್ಪ ರವರ ಹಿಂದೆ ಕುಳಿತಿದ್ದೆ ಎಂದರೆ ಸರಿ. ಆ ದಿನ ಸಂಗಪ್ಪ ರವರು ಚಾಲನೆಯನ್ನು ಮಾಡುತ್ತಿದ್ದರು. ಕಾರುಮತ್ತು ಬೈಕ ಡಿಕ್ಕಿ ಆಗಿರುವುದಕ್ಕೆ ಅಪಘಾತ ಆಗಿರುತ್ತದೆ ಎಂದರೆ ಸರಿ. ಬೈಕಿನ ಮುಂದಿನ ಹ್ಯಾಂಡಲ್ ಗಳು ಟ್ವಿಸ್ಟ ಆಗಿರುತ್ತವೆ ಎಂದರೆ ಸಾಕ್ಷಿದಾರರು ನಮ್ಮ ಹಿಂದಿನಿಂದ ಕಾರು ಅಪಘಾತ ಪಡಿಸಿರುತ್ತದೆ ಎಂದು ಹೇಳುತ್ತಾರೆ. ಸದರಿ ಅಪಘಾತವು ಸಂಗಪ್ಪನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸಂಗಪ್ಪನಿಗೆ ಡಿ ಎಲ್ ಇರಲಿಲ್ಲ ಎಂದರೆ ಸಾಕ್ಷಿದಾರರು ಇರಬಹುದು ಎಂದು ಹೇಳುತ್ತಾರೆ. ಸಂಗಪ್ಪನಿಗೆ ಡಿಎಲ್ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸ ಠಾಣೆಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಪರಿಹಾರದ ಹಣಕ್ಕೊಸ್ಕರ ಪ್ರಕರಣ ದಾಖಲಿಸಿದ್ದು, ಅದರಲ್ಲಿ ದಾಖಲೆಗಳನ್ನು ಹಾಜರು ಪಡಿಸಿದ್ದೆ. ಅದರಲ್ಲಿ ಅಂತಿಮ ವರದಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಂಗಪ್ಪರವರಿಗೆ ಡಿಎಲ್ ಇರುವುದಿಲ್ಲ ಎಂದು ಪೋಲಿಸರು ತಮ್ಮ ಅಂತಿಮವರದಿಯಲ್ಲಿ ಕಾಣಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಬೈಕ ಯಾರಿಗೆಸಂಬಂದ ಪಟ್ಟಿದ್ದು ಎಂದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಸದರಿ ಘಟನೆಯು ಹೇಗೆ ಆಗಿದೆ ಎಂದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ

ಪ್ರಕರಣದ ಮಾಹಿತಿ ಇರದೇ ಇರುವುದರಿಂದ ಬೈಕಿನ ಮಾಲೀಕರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸಂಗಪ್ಪ ರವರು ನನ್ನ ಕುಟುಂಬದ ಸದಸ್ಯರಲ್ಲ. ಸಂಗಪ್ಪರವರ ಗಳಿಕೆ ಮತ್ತು ಖರ್ಚಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೃತ ಸಂಗಪ್ಪ ರವರ ವಾರಸುದಾರರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಗಪ್ಪ ರವರು ಜೆಸಿಬಿ ನಡೆಸುತ್ತಿದ್ದರು ಮತ್ತು ಸ್ವಂತ ಟ್ರ್ಯಾಕ್ಟರನ್ನು ಹೊಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಗಪ್ಪರವರು ಪ್ರತಿ ತಿಂಗಳು 50000/- ರೂ.ಗಳನ್ನು ದುಡಿಯುತ್ತಿದ್ದರು ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಸಮನ್ಸ ಬಂದಿತ್ತಾ ಎಂದರೆ ಸಾಕ್ಷಿದಾರರು ನನಗೆ ಪೋಲಿಸರು ಪೋನ ಮಾಡಿದ್ದರು ಎಂದು ಹೇಳುತ್ತಾರೆ. ನನಗೆ ಪೋಲಿಸರು ಪೋನ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದಿರುತ್ತದೆ. ಸದರಿ ಪ್ರಕರಣದ ಬಗ್ಗೆ ಮಾಹಿತಿ ಇರದೇ ಇದ್ದರೂ ಸಂಗಪ್ಪ ರವರ ವಾರಸುದಾರರಿಗೆ ಪರಿಹಾರದ ಹಣ ಬರಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 3 ನೇ ಎದುರುದಾರರು ತಮ್ಮ ತಕರಾರನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.